ಸಾಹಿತ್ಯಲೋಕದ ಸಮಾನಾಂತರ ಉದಾಹರಣೆಯೊಂದನ್ನು ಎತ್ತಿ ಹೇಳುವುದಾದರೆ, ದಲಿತರ ಮತ್ತು ಸ್ತ್ರೀಯರ ಅನುಭವಗಳನ್ನು ಬರೆಯುವುದಕ್ಕೆ ಸ್ವತಃ ದಲಿತ, ಸ್ತ್ರೀಯೂ ಆಗಿರುವುದು ಎಷ್ಟು ಅವಶ್ಯಕ ಎಂಬುದನ್ನು ಕುರಿತು ಕನ್ನಡದ ಸಾರಸ್ವತಗಂಗೆಯಲ್ಲಿ ಸಾಕಷ್ಟು ನೀರು ಹರಿದಿದೆ. ಈ ದೃಷ್ಟಿಯಿಂದ ನನಗೆ ಈ ವಿಷಯವನ್ನು ಕುರಿತು ಬರೆಯಲು ಹೆಚ್ಚಿನ ಅರ್ಹತೆ ಇದೆಯೆಂದು ನಾನು ತಿಳಿದಿದ್ದೇನೆ – ಇದು ನಿದ್ದೆ ಬಾರದಿರುವ ಬಗ್ಗೆ ನಿದ್ದೆ ಬಾರದೆ ಇದ್ದವನೊಬ್ಬ ಬರೆದ ಪ್ರಬಂಧವಾಗಿರುವುದರಿಂದ ದಲಿತರ ಬಗ್ಗೆ ದಲಿತರೇ ಬರೆದಿರುವಂಥ ಅಧಿಕೃತ ಪ್ರಮಾಣವೊಂದು ಈ ಬರಹಕ್ಕೆ ಇರಬಹುದೆಂದು ನನ್ನ ಊಹೆ.

ಆದರೆ, ಈ ವಾದದ ಹಿಂದೆಯೇ ಇನ್ನೊಂದು ವಿರೋಧಾಭಾಸವೂ ಅಡಗಿದೆ – ಕಾರಣ, ನಿದ್ದೆ ಬಂದವರು ನಿದ್ದೆ ಬಂದಾಗಲೇ ನಿದ್ದೆಯ ಬಗ್ಗೆ ಬರೆಯುವುದು ಸಾಧ್ಯವಿಲ್ಲ ಎಂಬುದೂ ನಮಗೆ ಗೊತ್ತಿದೆ; ಹಾಗೂ ನಿದ್ದೆಯನ್ನು ಕುರಿತು ಏನು ಅನುಭವವಾಗುವುದಿದ್ದರೂ ಅದು ಎಚ್ಚರವಾದ ಬಳಿಕ ಮಾತ್ರವೇ ಸರಿ ಎಂಬುದೂ ನಮಗೆಲ್ಲರಿಗೂ ಪರಿಚಿತವಾದ ಸತ್ಯ. ಇದನ್ನೇ ವಿಸ್ತರಿಸಿ ನೋಡಿದರೆ, ಈ ಸಂಗತಿಯು ಬರೀ ನಿದ್ದೆಗೆ ಮಾತ್ರ ಸೀಮಿತವಲ್ಲ, ಯಾವುದೇ ಅನುಭವವನ್ನು ಕುರಿತೂ ನಿಜವೇ ಎಂಬುದೂ ನಮಗೆ ವೇದ್ಯವಾಗತೊಡಗುತ್ತದೆ. ಯಾವುದೇ ಅನುಭವವನ್ನು ಕುರಿತು ಯೋಚಿಸಲಿಕ್ಕಾಗಲೀ ಬರೆಯುವುದಕ್ಕಾಗಲೀ ಅದು ಆಗುವುದು ಎಷ್ಟು ಮುಖ್ಯವೋ, ಅದರಿಂದ ಹೊರಗೆ ಬಂದಿರುವುದೂ ಅಷ್ಟೇ ಅಗತ್ಯ. ಈಚೆಗೆ ನಾನು ಮತ್ತೊಮ್ಮೆ ಓದುತ್ತಿರುವ ಭವಭೂತಿಯ 'ಉತ್ತರರಾಮಚರಿತ' ನಾಟಕದಲ್ಲಿ ಏನಾಗುತ್ತದೆ ನೋಡಿ – ರಾಮಸೀತೆಯರು ನಿಜವಾಗಿ ವನವಾಸದ ಅನುಭವವನ್ನು ಪಡೆಯುವುದು ವನವಾಸದಲ್ಲಿ ಇದ್ದಾಗ ಅಲ್ಲ. ಅವರೀಗ, ಲಂಕೆಯಿಂದ ಹಿಂದಿರುಗಿ ಬಂದಿದ್ದಾರೆ; ಪಟ್ಟಾಭಿಷೇಕ ನಡೆದ ಅನಂತರ ಸೀತೆಯು ಗರ್ಭಿಣಿಯಾಗಿದ್ದಾಳೆ; ಹಾಗೇ ಒಂದು ದಿನ ಆಸ್ಥಾನದಲ್ಲಿ ಸ್ವಸ್ಥವಾಗಿ ಕೂತು ವನವಾಸದ ಚಿತ್ರಗಳನ್ನು ನೋಡುವಾಗ ಅವರಿಗೆ ವನವಾಸವೆಂಬ ಅನುಭವವು ಮೂರ್ತವಾಗಿ ಕಾಣಿಸಿಕೊಳ್ಳಲಿಕ್ಕೆ ಆರಂಭವಾಗುತ್ತದೆ. ಭವವೊಂದು ಅನುಭವವಾಗಿ ಮಾರ್ಪಡುವುದಕ್ಕೆ ಇಷ್ಟು ಸಮಯ–ಸಂದರ್ಭಗಳ ದೂರ ಅಗತ್ಯ – ಎಂದು ಇಂಥ ಕಟ್ಟೋಣದ ಮೂಲಕ ಭವಭೂತಿಯು ಹೇಳುತ್ತಿರಬಹುದೆ? ಅಂದರೆ, ಈಗದು ಇಲ್ಲದಿರುವಾಗ ಮಾತ್ರವೆ ಹಿಂದೊಮ್ಮೆ ಇದ್ದದ್ದು ಕಾಣತೊಡಗುತ್ತದೆ ಎಂದೂ ಆತ ಸೂಚಿಸುತ್ತಿರಬಹುದಲ್ಲವೆ? ಉದಾಹರಣೆಗೆ, ದೇಶ ಬಿಟ್ಟು ಹೋದಾಗ ಮಾತ್ರವೇ ಸ್ವದೇಶವೆಂಬ ಭಾವನೆಯೂ ಸ್ವಾತಂತ್ರ್ಯಕ್ಕೆ ಬಾಧೆ ಉಂಟಾದಾಗ ಮಾತ್ರವೇ ಸ್ವಾತಂತ್ರ್ಯದ ಇಲ್ಲದಿರುವಿಕೆಯ ಅನುಭವವೂ ಆಗುವುದು ಸಾಧ್ಯ – ಅಲ್ಲವೆ? ಅದೇ ರೀತಿ, ನಿದ್ದೆಯ ಬಗ್ಗೆ ಬರೆಯಲು ನಿದ್ದೆ ಬಾರದೆಯೆ ಇರುವುದು ಅನಿವಾರ್ಯವಾಗುತ್ತದೆಯಲ್ಲವೆ?– ಈ ಬಗೆಯ ಹಲವು ಜಟಿಲ ಮೀಮಾಂಸೆಯ ಪ್ರಶ್ನೆಗಳನ್ನು ನಾನು ನಿದ್ರೆ ಬಾರದ ಸಮಯದಲ್ಲಿ ತುಂಬ ವಿವರವಾಗಿ ಪರಿಶೀಲಿಸಿದ್ದೇನೆ.

ಇದಕ್ಕೆ ತದ್ವಿರುದ್ಧವಾಗಿ, ಅಧಿಕೃತವಾಗಿ ಅನುಭವ ಆಗದೆಯೂ, ಅದರ ಬಗ್ಗೆ ನಾವೆಲ್ಲ ಅಭಿವ್ಯಕ್ತಿಸುವ ಸಂದರ್ಭಗಳೂ ಹಲವಿದ್ದಾವೆ – ಉದಾಹರಣೆಗೆ, ಹ್ಯಾಮ್ಲೆಟ್‌ನ ಸಾವನ್ನು ಅಭಿನಯಿಸಿ ತೋರಿಸಬೇಕಾದ ರಂಗನಟನೊಬ್ಬ, ಸಾವಿನ ಸ್ವಾನುಭವ ತನಗೆ ಆಗುವವರೆಗೂ ಕಾದುಕೂತಿದ್ದರೆ, ಮತ್ತೆ ಅವನಿಗೆ ಹ್ಯಾಮ್ಲೆಟ್ ಆಗಿ ಅಭಿನಯಿಸುವುದು ಸಾಧ್ಯವಾಗದೆ ಇರುವುದರಿಂದ ಅವನು ಬದುಕಿದ್ದಾಗಲೇ ಸಾವಿನ ಅಭಿನಯ ಮಾಡಲು ಸಿದ್ಧನಾಗಬೇಕಾಗುತ್ತದೆ. ಕಲಾಕಾರರ ಅಥವಾ ಬರಹಗಾರರ ಸ್ಥಿತಿಯೂ ಬೇರೆಯೇನಲ್ಲ. 'ಮೆಷರ್ ಫಾರ್ ಮೆಷರ್' ಎಂಬ